ಕರ್ನಾಟಕ ಸರ್ಕಾರ

ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 100 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, 5 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ 8 ನವೋದಯ ಮಾದರಿ ವಸತಿ ಶಾಲೆಗಳಿಗೆ 2022-23ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ, ಪ್ರವೇಶ ಪರೀಕ್ಷೆ ಮತ್ತು ದಾಖಲಾತಿಯ ಮಾರ್ಗಸೂಚಿಗಳು.


ಕರ್ನಾಟಕ ಸರ್ಕಾರ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

**ಅಲ್ಪಸಂಖ್ಯಾತರ ನಿರ್ದೇಶನಾಲಯ**

**MINORITY WELFARE DEPARTMENT**

**DIRECTORATE OF MINORITIES**

ನಂ.16/J, ಮೌಲಾನಾ ಆಜಾದ್ ಭವನ,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಕಾವೇರಪ್ಪ ಲೇಔಟ್, ವಸಂತ ನಗರ, ಬೆಂಗಳೂರು-560 052.

**(#16C-2, Miller Tank Bed Area Vasantha Nagara, Bengaluru-560052)**

ದೂರವಾಣಿ: 080-22864212.

ಫ್ಯಾಕ್ಸ್: 080-22863618

**Help Line No: 8277799990**

**Email:**directorgokdom@gmail.com

**Web**: www.gokdom.kar.nic.in

| ಕ್ರ.ಸಂ | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| 1 | ಪೀಠಿಕೆ | 2 |
| 2 | ಪ್ರವೇಶಾತಿ ಸಂಖ್ಯೆ | 2 |
| 3 | ವರ್ಗವಾರು ಮೀಸಲಾತಿ ಹಂಚಿಕೆ | 2-3 |
| 4 | ವಿಶೇಷ ವರ್ಗಗಳಿಗೆ ಸ್ಥಾನಗಳ ಹಂಚಿಕೆ | 3-4 |
| 5 | ಜಾತಿ ಮತ್ತು ಆದಾಯ ಪ್ರಮಾಣ ಪತ್ರ | 4 |
| 6 | ಪ್ರವೇಶ ಪ್ರಕ್ರಿಯೆ | 5 |
| 7 | ಅಭ್ಯರ್ಥಿಗಳು ಅರ್ಜಿಸಲ್ಲಿಸಲು ಇರಬೇಕಾದ ಅರ್ಹತೆಗಳು | 5 |
| 8 | ಅಭ್ಯರ್ಥಿಗಳು ಅರ್ಜಿಸಲ್ಲಿಸುವ ವಿಧಾನ | 5 |
| 9 | ಅರ್ಜಿ ಸಲ್ಲಿಸಲು ಬೇಕಾಗುವ ದಾಖಲಾತಿಗಳು | 5-6 |
| 10 | ಪ್ರವೇಶ ಪರೀಕ್ಷೆ ವಿಧಾನ | 6 |
| 11 | ಸೀಟು ಹಂಚಿಕೆ ಮತ್ತು ದಾಖಲಾತಿ (ಕೌನ್ಸಲಿಂಗ್ ವಿಧಾನ) | 6 |
| 12 | ಖಾಲಿ ಉಳಿದ ಸ್ಥಾನಗಳ ಭರ್ತಿ | 6-7 |
| 13 | ವಸತಿ ಶಾಲಾ ಸಿಬ್ಬಂದಿ ಮತ್ತು ಸರ್ಕಾರಿ ನೌಕರ ಮಕ್ಕಳಿಗೆ ಅವಕಾಶ | 7 |
| 14 | ವಸತಿ ಶಾಲೆಗೆ ಪ್ರವೇಶ ನೀಡುವುದಕ್ಕೆ ಈ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನೊಳಗೊಂಡ ಆಯ್ಕೆ ಸಮಿತಿ ಇರುತ್ತದೆ | 7 |
| 15 | ವಸತಿ ಶಾಲೆಗಳಿಗೆ ಪ್ರವೇಶ ನೀಡುವ ವೇಳಾಪಟ್ಟಿ | 7 |
| 16 | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು | 7 |
| 17 | ಅಲ್ಪಸಂಖ್ಯಾತರ ವಸತಿ ಶಾಲೆ/ಸರ್ಕಾರಿ ವಸತಿ ಶಾಲೆಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ | 8 |
| 18 | ವಸತಿ ಶಾಲೆಗಳಿಗೆ ಪ್ರವೇಶಕ್ಕಾಗಿ ಅನುಸರಿಸುವ ಮಾನದಂಡಗಳು | 8-9 |
| 19 | ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆಗಳು (ನವೋದಯ) | 9 |
| 20 | ಅನುಸರಿಸಬೇಕಾದ ಮಾನದಂಡಗಳು | 9-10 |
| 21 | ವಿಶೇಷ ಸೂಚನೆ | 10 |

1. ಪೀಠಿಕೆ:-

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ 100 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು 6 ರಿಂದ 10ನೇ ತರಗತಿಯವರೆಗೆ, 8 ಮಾದರಿ ವಸತಿ ಶಾಲೆ(ನವೋದಯ)ಗಳು 6 ರಿಂದ 12ನೇ ತರಗತಿಯವರೆಗೆ, 5 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ 21 ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳು 11 ರಿಂದ 12 ನೇ ತರಗತಿಯವರೆಗೆ ಕಾರ್ಯ ನಿರ್ವಹಿಸುತ್ತಿವೆ. ಸದರಿ 134 ವಸತಿ ಶಾಲೆ/ಕಾಲೇಜುಗಳ ಪೈಕಿ 113 ವಸತಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಾತಿಗೆ ಸುಮಾರು 6400 ಸೀಟುಗಳು ಲಭ್ಯವಿದ್ದು, ಸದರಿ ಸೀಟುಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಲು ಅನುಸರಿಸಬೇಕಾದ ಪ್ರವೇಶ ಪರೀಕ್ಷೆ, ವಿದ್ಯಾರ್ಥಿಗಳ ಸಂಖ್ಯೆ, ವರ್ಗವಾರು ಮೀಸಲಾತಿ, ವಿಶೇಷ ವರ್ಗಗಳಿಗೆ ಮೀಸಲಾತಿ ಹಾಗೂ ಪರೀಕ್ಷೆ ಮಾರ್ಗಸೂಚಿ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವತಿಯಿಂದ ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಆದ್ದರಿಂದ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ ಮಾದರಿ ವಸತಿ ಶಾಲೆ(ನವೋದಯ)ಗಳಲ್ಲಿ 6ನೇ ತರಗತಿಯ ಪ್ರವೇಶಾತಿಗೆ ಕೆಳಕಂಡ ನಿಬಂಧನೆ/ಷರತ್ತು/ಮಾರ್ಗಸೂಚಿಗಳನ್ನು ಅನುಸರಿಸಬೇಕಾಗಿರುತ್ತದೆ.

2. **ಪ್ರವೇಶಾತಿ ಸಂಖ್ಯೆ**: ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ ಸರ್ಕಾರಿ ಮಾದರಿ ವಸತಿ ಶಾಲೆ(ನವೋದಯ)ಗಳಲ್ಲಿ ಸಾಮಾನ್ಯವಾಗಿ 6ನೇ ತರಗತಿಯ ಪ್ರವೇಶಾತಿ ಸಂಖ್ಯೆಯು ಈ ಕೆಳಗಿನಂತಿರುತ್ತದೆ ಹಾಗೂ ಕೆಲವು ಶಾಲೆಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಪ್ರವೇಶಾತಿಯನ್ನು ಸರ್ಕಾರದ ಆದೇಶದಂತೆ ಪರಿಷ್ಕರಿಸಲಾಗಿರುತ್ತದೆ.

| ಕ್ರ.ಸಂ | ವಸತಿ ಶಾಲೆಯ ಹೆಸರು | 6ನೇ ತರಗತಿಗೆ ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | ಸರ್ಕಾರಿ ಮುಸ್ಲಿಂ ವಸತಿ ಶಾಲೆ | 50 |
| 2 | ಮೊರಾರ್ಜಿ ದೇಸಾಯಿ ವಸತಿ ಶಾಲೆ | 50/60 |
| 3 | ಸರ್ಕಾರಿ ಮಾದರಿ ವಸತಿ ಶಾಲೆ(ನವೋದಯ) | 80 |

3. **ವರ್ಗವಾರು ಮೀಸಲಾತಿ ಹಂಚಿಕೆ**: ಸರ್ಕಾರದ ಆದೇಶಗಳನ್ವಯ ಮಂಜೂರಾಗಿರುವ ವಿವಿಧ ವಸತಿ ಶಾಲೆಗಳಿಗೆ 6ನೇ ತರಗತಿಗೆ ಆಯ್ಕೆ ಮಾಡಿ ದಾಖಲು ಮಾಡುವಲ್ಲಿ ಪ್ರತಿ ವರ್ಗದ ವಸತಿ ಶಾಲೆಯು ಅನುಸರಿಸಬೇಕಾದ ಮೀಸಲಾತಿ ವಿವರ ಕೆಳಕಂಡಂತೆ ಇರುವುದು. ಸದರಿ ಮೀಸಲಾತಿಯನ್ನು 6ನೇ ತರಗತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ದಾಖಲಾತಿ ಮಾಡಿಕೊಳ್ಳುವಾಗ ತಪ್ಪದೇ ಅನುಷ್ಠಾನಗೊಳಿಸುವುದು.

**a) ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು:-**

(1) ಪ್ರತಿ ವಸತಿ ಶಾಲೆಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ : 50,

(2) ಮುಸ್ಲಿಂ : 100% (50 ವಿದ್ಯಾರ್ಥಿಗಳು),

(3) ಹೆಣ್ಣು ಮಕ್ಕಳಿಗೆ 50% ಸ್ಥಾನಗಳನ್ನು ಮೀಸಲಿರಿಸಲಾಗಿದೆ.